ಸಂಡೂರು ತಾಲ್ಲೂಕು ರಾಮಗಡ ರಕ್ಷಿತ ಅರಣ್ಯ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ

943 (485) - ಶ್ರೀ ಸಿರಾಜ್ ಶೇಖ್ (ಕೂಡ್ಲಿಗಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸಂಡೂರು ತಾಲ್ಲೂಕು ರಾಮಘಡ ರಕ್ಷಿತ ಅರಣ್ಯ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆಯು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ. ಬಂದಿದೆ.

ಆ. ಅಕ್ರಮ ಗಣಿಗಾರಿಕೆ ನಡೆಸಿದ ಬಗ್ಗೆ ಅರಣ್ಯ ಅಪರಾಧವನ್ನು ದಾಖಲು ಮಾಡಲಾಗಿದೆ. ಮತ್ತು ಅರಣ್ಯ ಕಾಯ್ದೆಯ ಅನ್ವಯ ಮುಂದಿನ ಕ್ರಮ ಜರುಗಿಸಲಾಗುತ್ತಿದೆ.

ಬೆಂಗಳೂರು ನಗರದಲ್ಲಿ ಶಬ್ದ, ಮತ್ತು ಜಲಮಾಲಿನ್ಯವನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡ ಕ್ರಮ

944 (1131) - ಶ್ರೀ ಸುಬ್ಬಾರೆಡ್ಡಿ ಕೆ.ಎನ್.(ಬಸವನಗುಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು ನಗರದಲ್ಲಿ ಶಬ್ದ, ವಾಯು ಮತ್ತು ಜಲಮಾಲಿನ್ಯವನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ. ಬೆಂಗಳೂರು ನಗರದಲ್ಲಿ ಜಲಮಾಲಿನ್ಯವನ್ನು ತಡೆಗಟ್ಟಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಪರಿಸರ ಕಾನೂನುಗಳು ಮತ್ತು ಸಂಬಂಧಿತ ಅಧಿಸೂಚನೆಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯನ್ನು ಸ್ಥಾಪಿಸಲಾಗಿದೆ.

ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ), ಕಾಯ್ದೆ 1974 ರಂತೆ ಕೈಗಾರಿಕೆಗಳ ತ್ಯಾಜ್ಯಗಳು ನಿಗಧಿತ ಮಾನಕಗಳ ಮಟ್ಟದಲ್ಲಿರಲು ಸತತ ಮಾಪನ.

ನಾರ್ವೇಜಿಯನ್ ಸರ್ಕಾರದ ಸಹಯೋಗದೊಂದಿಗೆ ಹೆಬ್ಬಾಳ ಮತ್ತು ಮಡಿವಾಳ ಕೆರೆಗಳ ಅಭಿವೃದ್ಧಿ.

ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರದ ರಚನೆ.

ವೃಷಭಾವತಿ, ಕೋರಮಂಗಲ ಮತ್ತು ಚಲ್ಲಘಟ್ಟ ಹಾಗೂ ಹೆಬ್ಬಾಳ ಕಣಿವೆಗಲ್ಲಿರುವ ಕೆರೆಗಳ ಮಾಲಿನ್ಯ ತಡೆಗಾಗಿ ರಾಷ್ಟ್ರೀಯ ನದಿ ಸಂರಕ್ಷಣ ಯೊಜನೆಯಡಿಯಲ್ಲಿ ರೂ. 49.51 ಕೋಟಿಗಳ ಪರಸರ ಕ್ರಿಯಾ ಯೋಜನೆ ಪ್ರಾರಂಭ.

ರಾಷ್ಟ್ರೀಯ ಕೆರೆ ಸಂರಕ್ಷಣೆ ಕಾರ್ಯಕ್ರಮದಡಿಯಲ್ಲಿ ರೂ. 12.32 ಕೋಟಿಗಳ ವೆಚ್ಚದಲ್ಲಿ ವೆಂಗಯ್ಯನ ಕೆರೆ, ಕಾಮಾಕ್ಷಿಪಾಳ್ಯ, ಜರಗನಹಳ್ಳಿ ಮತ್ತು ನಾಗವಾರ ಕೆರೆಗಳ ಸಂರಕ್ಷಣೆಯನ್ನು ತೆಗೆದುಕೊಳ್ಳಲಾಗಿದೆ.

ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯವನ್ನು ತಡೆಗಟ್ಟಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಬೆಂಗಳೂರು ನಗರದ 4 ಸ್ಥಳಗಳಲ್ಲಿ ಪರಿವೇಷ್ಯಕ ವಾಯುಗುಣ ಮಾಪನ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಸಾರಿಗೆ ಇಲಾಖೆಯಿಂದ ವಾಹನಗಳಿಂದ ಹೊರಬರುವ ಹೊಗೆಯ ತಪಾಸಣೆ.

ಸಾರ್ವಜನಿಕರಿಗೆ ವಾಯುಮಾಲಿನ್ಯದ ಕುರಿತು ಜಾಗೃತಿ ಹಾಗೂ ವಾಹನಗಳಿಂದ ಹೊರಬರುವ ಹೊಗೆಯ ತಪಾಸಣೆ ಮಾಡಲು 5 ಪರಿಸರ ವಾಹಿನಿ ವಾಹನಗಳ ಬಳಕೆ.

ಉದ್ದಿಮೆಗಳು ಹೊರಸೂಸುವ ತ್ಯಾಜ್ಯಗಳು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ), ಕಾಯ್ದೆ 1974 ರಂತೆ ನಿಗಧಿತ ಮಾನಕಗಳ ಮಟ್ಟದಲ್ಲಿರಲು ಸತತ ಮಾಪನ.

ಸರ್ಕಾರದ ಅಪರ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ಸಮಿತಿ ರಚನೆ.

ಬೆಂಗಳೂರು ನಗರದಲ್ಲಿ ಶಬ್ದ ಮಾಲಿನ್ಯವನ್ನು ತಡೆಗಟ್ಟಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯವು ಹೊರಡಿಸಿರುವ ಅಧಿಸೂಚನೆ ಸಂಖ್ಯೆ ಎಸ್.ಓ. 123 (ಇ) ಶಬ್ದ ಮಾಲಿನ್ಯ (ನಿರ್ಬಂಧ ಮತ್ತು ನಿಯಂತ್ರಣ) ನಿಯಮಗಳು 2000, ದಿನಾಂಕ: 14-2-2000 ಅನ್ನು ಶಬ್ದ ಮಾಲಿನ್ಯ ನಿಯಂತ್ರಣಕ್ಕಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಬೆಂಗಳೂರು ನಗರದ ಹಳೆಯ ಮರಗಳ ಬಗ್ಗೆ

945 (1133) - ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೆಂಗಳೂರು ನಗರದಲ್ಲಿ ಕೆಲವು ಹಳೆಯ ಮರಗಳಿದ್ದು, ಅವುಗಳನ್ನು ತೆಗೆಯಬೇಕಾಗಿದ್ದ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ ಕೆಲವು ಮರ ಕಡಿಯುವ ಅಧಿಕಾರ ನೀಡುವ ಪ್ರತ್ಯಾಯೋಜನೆ ಪ್ರಸ್ತಾವನೆ ಏನಾದರೂ ಇದೆಯೇ?

ಶ್ರೀ ಕೆ.ಹೆಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

1. ಸಾರ್ವಜನಿಕರು, ಪೋಲೀಸ್, ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಇತರ ಸಂಘ ಸಂಸ್ಥೆಯಿಂದ ಯಾವುದೇ ಹಳೆ ಮರ ಅಥವಾ ಅಪಾಯ ಸ್ಥಿತಿಯಲ್ಲಿರುವ ಮರಗಳ ಬಗ್ಗೆ ವೃಕ್ಷಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು ಇವರ ಗಮನಕ್ಕೆ ತಂದಾಗ ಅಂತಹ ಮರಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಕಡಿತಲೆ ಆದೇಶವನ್ನು ನೀಡಲು ಶೀಘ್ರ ಕ್ರಮ ಕೈಗೊಳ್ಳಲಾಗುತ್ತಿದೆ.

2. ಮರ ಸಂರಕ್ಷಣಾ ಕಾಯ್ದೆಯನ್ವಯ ಕೇವಲ ಅರಣ್ಯ ಅಧಿಕಾರಿಗಳಿಗೆ ಮಾತ್ರ ವೃಕ್ಷಾಧಿಕಾರಿ ಆಗಿ ಕಾರ್ಯ ನಿರ್ವಹಿಸಲು ಅಧಿಕಾರವಿರುತ್ತದೆ. ವೃಕ್ಷಾಧಿಕಾರಿಯ ಆದೇಶದ ಮೇಲೆ ಯಾವುದೇ